International Journal of Kannada Research
www.kannadajournal.com

ISSN: 2454–5813
IJSR 2016; 2(1): 10-12
© 2016 IJKS
www.kannadajournal.com
Received: 03-11-2015
Accepted: 04-12-2015

**Dr. Puttamani Devida**
Asst. Professor, Department of Kannada, Sharanabasveshwar Commerce Degree College, Kalaburagi-585103.

**Correspondence**
**Dr. Puttamani Devida**
Asst. Professor, Department of Kannada, Sharanabasveshwar Commerce Degree College, Kalaburagi-585103.

# ಪದವಿ ಶಿಕ್ಷಣದಲ್ಲಿ ಕನ್ನಡ ಪಠ್ಯಕ್ರಮ: ಕೆಲವು ಟಿಪ್ಪಣಿಗಳು

**Dr. Puttamani Devidas**

ವಿಶ್ವವಿದ್ಯಾಲಯಗಳೆಂದರೆ ಅವು ವಿದ್ಯೆ, ಜ್ಞಾನದ ಕೇಂದ್ರಗಳಾಗಿವೆ. ಮತ್ತು ಅವುಗಳನ್ನು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರತೀಕವೆಂದು ನಂಬಲಾಗಿದೆ.ಏಕೆಂದರೆ ಅವು ಜ್ಞಾನವನ್ನು ಸೃಷ್ಠಿ ಮಾಡುವುದರ ಮೂಲಕ, ಅದನ್ನು ಹಂಚುವುದರ ಮೂಲಕ ಸದೃಢವಾದ ಸಮಾಜ ಹಾಗೂ ರಾಷ್ಟ್ರವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹಾಗಾಗಿ ಇಂತಹ ವಿಶ್ವವಿದ್ಯಾಲಯಗಳಲ್ಲಿ ಜ್ಞಾನವನ್ನು ಪಡೆದುಕೊಂಡು ವಿವಿಧ ಕ್ಷೇತ್ರಗಳಲ್ಲಿ ಅಗಾಧವಾದ ಸಾಧನೆಗಳನ್ನು ಮಾಡಿ ಆ ಮೂಲಕ ನಾಡು–ನುಡಿಗಳ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತವಾದ ಮಾನವ ಸಂಪನ್ಮೂಲವೂ ಇದೆ. ಹಾಗೆಯೇ ವಿಶ್ವವಿದ್ಯಾಲಯ ಎನ್ನುವುದೇ ವಿಶ್ವವನ್ನು ಒಳಗೊಳ್ಳುವ ಸಾರ್ವತ್ರಿಕತೆಯನ್ನು ಪ್ರತಿನಿಧಿಸುವುದೇ ಆಗಿದೆ. ಹಾಗಾದರೆ ಇಂತಹ ಸಾರ್ವತ್ರಿಕತೆ ವಿಶ್ವವಿದ್ಯಾಲಯ ರೂಪಿಸುವ ಪಠ್ಯಕ್ರಮದಲ್ಲಿ ಎಷ್ಟರಮಟ್ಟಿಗಿದೆ ಎಂಬುದನ್ನು ತಿಳಿಯುವುದೇ ಈ ಪ್ರಬಂಧದ ಉದ್ದೇಶವಾಗಿದೆ.ಪ್ರಾತಿನಿಧಿಕವಾಗಿ ಗುಲಬರ್ಗಾ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬಿಜಾಪೂರ ವಿಶ್ವವಿದ್ಯಾಲಯಗಳ ಪಠ್ಯಕ್ರಮಗಳನ್ನು ಅವಲೋಕಿಸುವ ಮೂಲಕ ಇದನ್ನು ತಿಳಿಯಬಹುದಾಗಿದೆ.

ಯಾವುದೇ ಪಠ್ಯಕ್ರಮವು ಸಮಾಜದಲ್ಲಿನ ಬದಲಾವಣೆಗಳು, ಭಾಷೆ ಮತ್ತು ಸಾಹಿತ್ಯ ಸ್ವರೂಪಗಳ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ಕಾಲದ ಅಗತ್ಯಗಳಿಗೆ ಅನುಗುಣವಾಗಿ ರೂಪಿಸಲ್ಪಡಬೇಕು.ಮಾಹಿತಿತಂತ್ರಜ್ಞಾನದಲ್ಲಾದ ಕ್ರಾಂತಿಯಿಂದ ವಿದ್ಯಾರ್ಥಿಗಳಿಗೆ ವಿಷಯದ ಮಾಹಿತಿ, ಮನರಂಜನೆಗಳು ಲಭ್ಯವಾಗುತ್ತಿದ್ದು ಅವರನ್ನು ಸಾಕಷ್ಟು ಪ್ರಭಾವಿಸುತ್ತಿವೆ. ಜಾಗತೀಕರಣವು ತನ್ನ ಕಬಂಧ ಬಾಹುಗಳನ್ನು ಹಳ್ಳಿಗಳವರೆಗೂ ಚಾಚುತ್ತಿದೆ. ಹಳ್ಳಿ ಮತ್ತು ನಗರಗಳೆರಡರ ಸಾಂಪ್ರದಾಯಕ ಚಹರೆಗಳು ಮತ್ತು ಬದುಕಿನ ಕ್ರಮ ಇದರಿಂದ ಪಲ್ಲಟಗೊಂಡಿದೆ. ಜಾಗತೀಕವಾಗಿ ಚಿಂತನಾ ಪ್ರಸ್ಥಾನಗಳು ಬದಲಾಗುತ್ತಿವೆ. ವಸಾಹತೋತ್ತರ, ಆಧುನಿಕೋತ್ತರ ಚಿಂತನೆಗಳು ದಮನಿತ (ಸಬಾಲ್ಟ್ರನ್) ನೆಲೆಯ ಚಿಂತನೆಗಳ ಭಾಷೆ ಮತ್ತು ಸಾಹಿತ್ಯಗಳನ್ನು ನೋಡುವ ಹಾಗೂ ಓದುವ ಕ್ರಮಗಳನ್ನು ಪ್ರಭಾವಿಸುತ್ತಿವೆ. ಐಟಿ ಬಿಟಿಗಳ ಮಾಯಾಲೋಕ ಹುಟ್ಟಿಸಿರುವ ಭ್ರಮೆಗಳಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗೆಗಿನ ಕೆಲವರ ನಿರ್ಲಕ್ಷ್ಯಅಥವಾ ಉದಾಸೀನತೆಯ ಹಿನ್ನೆಲೆಯಲ್ಲಿ ಹಲವು ಸವಾಲುಗಳು ನಮ್ಮೆದುರಿಗೆ ಇವೆ.

ಈ ನಿಟ್ಟಿನಲ್ಲಿ ಸಮಕಾಲೀನ ಸಂದರ್ಭಕ್ಕೆಅನುಗುಣವಾದ ಪಠ್ಯಕ್ರಮಗಳು ರೂಪುಗೊಂಡಾಗ ಮಾತ್ರ ನಮ್ಮ ಶಿಕ್ಷಣದ ಉದ್ದೇಶ ಮತ್ತು ಗುರಿಗಳನ್ನು ಸಾಧಿಸಲಿಕ್ಕೆ ಸಾಧ್ಯವಾಗುತ್ತದೆ.ಈ ಹಿನ್ನೆಲೆಯಲ್ಲಿ ನಮ್ಮ ವಿಶ್ವವಿದ್ಯಾಲಯಗಳು ಪದವಿ ಹಂತದಲ್ಲಿ ಯಾವ ರೀತಿಯ ಪಠ್ಯಕ್ರಮ, ಪಠ್ಯವಸ್ತು ಮತ್ತು ಪಠ್ಯಗಳಿಂದ ಕೂಡಿವೆ ಎಂಬುದನ್ನು ಈ ಮೊದಲು ಹೇಳಿದಂತೆ ಬೇರೆ ಬೇರೆ ವಿಶ್ವವಿದ್ಯಾಲಯಗಳ ಪಠ್ಯಕ್ರಮಗಳ ಹಿನ್ನೆಲೆಯಲ್ಲಿಚರ್ಚಿಸಬಹುದಾಗಿದೆ.

### ಬೆಂಗಳೂರು ವಿಶ್ವವಿದ್ಯಾಲಯದ ಪಠ್ಯಕ್ರಮದ ಸ್ವರೂಪ

ಯಾವುದೇ ವಿಶ್ವವಿದ್ಯಾಲಯವು ತನ್ನ ನಿರ್ದಿಷ್ಟ ಉದ್ದೇಶ ಮತ್ತು ಗುರಿಗಳನ್ನು ಒಳಗೊಂಡಿರುತ್ತದೆ ತನ್ನಗುರಿ ಸಾಧನೆಗೆ ಅನುಗುಣವಾಗುವಂತೆ ಒಂದು ನಿರ್ದಿಷ್ಟ ಪಠ್ಯಕ್ರಮವನ್ನು ರೂಪಿಸಿಕೊಂಡಿರುತ್ತದೆ.ಯಾವುದೇ ಪಠ್ಯಕ್ರಮವು ಬದಲಾದ ಕಾಲದ ಸಮಸ್ಯೆ ಸವಾಲುಗಳು ಮತ್ತು ಅಗತ್ಯಗಳಿಗೆ ಅನುಗುಣವಾಗಿ ಪುನರ್‌ರಚಿಸಲ್ಪಡುತ್ತಿರುತ್ತದೆ. ಈ ನಿಟ್ಟಿನಲ್ಲಿ ಬೆಂಗಳೂರು ವಿಶ್ವಿದ್ಯಾಲಯ ೨೦೦೭ರಲ್ಲಿ ಪಠ್ಯಕ್ರಮವನ್ನು ಬದಲಾವಣೆಗೆ ಒಳಪಡಿಸಿತು.ಆದರೆ ಈ ಬದಲಾವಣೆಯು ಇದುವರೆಗೆನ ಅಧ್ಯಯನಕ್ರಮಕ್ಕಿಂತ ತೀರಾ ಹೊಸದಾದ ಮತ್ತು ಭಿನ್ನವಾದ ಸ್ವರೂಪದಿಂದ ಕೂಡಿತ್ತು. ಇದು ಸಮಕಾಲೀನ ಸಂದರ್ಭದ ಸ್ವರೂಪ, ತಲ್ಲಣ ಮತ್ತು ಅಗತ್ಯಗಳನ್ನು ಒಳಗೊಳ್ಳುವುದರ ಜೊತೆಗೆ ವಿದ್ಯಾರ್ಥಿಗಳಿಗೆ ತಮ್ಮ ಜನಜೀವನ ಮತ್ತು ಸಂಸ್ಕೃತಿಯ ಬಗೆಗಿನ ಜ್ಞಾನವನ್ನು ವಿಸ್ತರಿಸುವಂತಹ ಪಠ್ಯಕ್ರಮವನ್ನು ರೂಪಿಸಿರುವಂತಹದ್ದು ನಿಜಕ್ಕೂ ಪ್ರಶಂಸಾರ್ಹ ವಿಚಾರವೇ ಆಗಿದೆ. ಏಕೆಂದರೆ ಇದೊಂದು ಅಂತರ್‌ಶಿಸ್ತೀಯ ಅಧ್ಯಯನದ ಮಾದರಿಯಾಗಿದ್ದು, ಕೇವಲ ವಿದ್ಯಾರ್ಥಿಗಳನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳದೇ ಬೋಧಕರು ಕೂಡ ಒಂದು ಪಠ್ಯವನ್ನು ಯಾವ ಯಾವ ನೆಲೆಗಳಿಂದ ಪ್ರವೇಶಿಸಬಹುದು ಎಂಬುದನ್ನು ಒಳಗೊಂಡಿರುತ್ತದೆ.ಅಂದರೆ ಪಠ್ಯವಿವರಣೆ ಮತ್ತು ಪಠ್ಯ ವಿಸ್ತರಣೆಯ ಕ್ರಮಗಳನ್ನು ಹೇಳುವುದರೊಂದಿಗೆ ಪೂರಕ ಓದಿಗಾಗಿ ಗಮನಿಸಬುದಾದ ಪುಸ್ತಕ ಸೂಚಿಯನ್ನುಒದಗಿಸುತ್ತದೆ.ಹಾಗೆಯೇಒಂದು

ವರ್ಷಕ್ಕೆ ಸಂಬಂಧಿಸಿದಂತಹ ಎರಡೂ ಸೆಮಿಸ್ಟರ್‌ಗಳ ಅಖಂಡಅಥವಾಒಂದೇ ಪಠ್ಯ ಪುಸ್ತಕವನ್ನು ಬಹು ಪಠ್ಯಪುಸ್ತಕಗಳ ಬದಲಿಗೆತರಲಾಯಿತು.ಮುಖ್ಯವಾದ ಸಂಗತಿಯೆಂದರೆ, ವಿಷಯವೊಂದರ ಪೂರಕ ಓದಿಗಾಗಿ ಎಷ್ಟು ಹುಡುಕಿದರೂ ಪುಸ್ತಕಗಳು ಸಿಗುವುದು ಕಷ್ಟ ಸಾಧ್ಯವಾದ ಸಂದರ್ಭದಲ್ಲಿ ಅವುಗಳನ್ನು ಸಂಗ್ರಹಿಸಿ ಕೊಟ್ಟಿದ್ದರಿಂದ ಭಿನ್ನ ನೆಲೆಗಳಿಂದ ಆ ವಿಷಯವನ್ನುಅರ್ಥೈಸಲು ಸಾಧ್ಯವಾಗುತ್ತದೆ.

ಇದೊಂದು ವಸ್ತು ಆಧಾರಿತ (ಥೀಮ್ ಬೇಸ್ಡ್) ಪಠ್ಯಕ್ರಮವಾದ್ದರಿಂದಒಂದು ವಸ್ತು ವಿಷಯವನ್ನು ಭಿನ್ನ ಭಿನ್ನ ನೆಲೆಗಳಿಂದ ನೋಡಲು ಸಾಧ್ಯವಾಗುವಂತೆ ಪಠ್ಯ ವಿಷಯವೊಂದನ್ನು ಪೂರ್ವಪಠ್ಯ, ಪ್ರಧಾನ ಪಠ್ಯ ಮತ್ತು ಪೂರಕ ಕಪಠ್ಯಗಳೆಂದು ವಿಭಜಿಸಲಾಗಿದ್ದು, ಪ್ರಾಚೀನ, ನವೀನ,

ಜಾನಪದ ಇತ್ಯಾದಿ ಸಾಹಿತ್ಯದ ಯಾವುದೇ ಭಾಗಗಳಿಂದ ವಿಷಯವನ್ನು ಹೆಣೆಯಲಾಗಿರುತ್ತಿತ್ತು. ಇದರಿಂದ ವಿದ್ಯಾರ್ಥಿಗಳಿಗೆ ಶಿಷ್ಟ ಅಥವಾ ಜನಪದಗಳ ಬಗೆಗಿನ ತರತಮಗಳು ಹೋಗಿ ವಿಷಯವೊಂದರ ಪೂರ್ಣಗ್ರಹಿಕೆಯೊಂದು ಲಭ್ಯವಾಗುತ್ತದೆ.ಆದರೂಇದಕ್ಕೊಂದು ಮಿತಿಯೂ ಇದೆ.ಕೆಲವೊಮ್ಮೆ ಪೂರ್ವಪಠ್ಯ, ಪ್ರಧಾನ ಪಠ್ಯ ಮತ್ತು ಪೂರಕ ಪಠ್ಯಗಳು ಯಾವುದೋ ಕಥೆ.ಕಾದಂಬರಿ, ಕಾವ್ಯ, ನಾಟಕಗಳ ಆದಿ, ಮಧ್ಯ, ಅಂತ್ಯಗಳ ಆಯ್ದ ಭಾಗಗಳಿಂದ ಕೂಡಿರುತ್ತವೆ. ಹೀಗಾದಾಗ ಪಠ್ಯಗಳ ಆರಂಭ, ಹಿನ್ನೆಲೆ ಮತ್ತು ಮಹತ್ವಗಳನ್ನು ತಿಳಿಸಿಯೇ ಬೋಧಿಸಬೇಕಾಗುವುದರಿಂದ ಸಮಯಾವಕಾಶ ಹೆಚ್ಚು ಬೇಕಾಗುತ್ತದೆ.ಸೆಮಿಸ್ಟರ್ ಪದ್ಧತಿಯ ನಿಗಿದಿತ ಸಮಯದಲ್ಲಿ ಈ ಎಲ್ಲವುಗಳ ಸಂಪೂರ್ಣ ಬೋಧನೆಗೆ ಸಮಯಾವಕಾಸದ ತೊಂದರೆ ಎದುರಾಗುತ್ತದೆ.ಉದಾಹರಣೆಗೆ ಬಿ.ಎ.ನಾಲ್ಕನೇ ಸೆಮಿಸ್ಟರ್‌ನಲ್ಲಿ 'ಜಾಗತಿಕ ಮತ್ತು ಸ್ಥಳೀಯತೆ' ಥೀಮ್ ಅಡಿಯಲ್ಲಿ ಗೋಕುಲ ನಿರ್ಗಮನ (ಕೆ.ವಿ. ಸುಬ್ಬಣ್ಣರವರ ಲೇಖನ)ದ ಪೂರ್ವಪಠ್ಯ ಪ್ರಧಾನಪಠ್ಯಗಳ ಧೀರ್ಘ ವಿವರಣೆ ಮತ್ತು ವಿಶ್ಲೇಷಣೆಗೆ ಹತ್ತಕ್ಕಿಂತ ಅಧಿಕ ತರಗತಿಗಳು ಬೇಕಾಗುತ್ತದೆ.

ಇನ್ನು ೨೦೧೦–೧೧ರಲ್ಲಿ ಬದಲಾದ ಪಠ್ಯಕ್ರಮವು ಈ ಮೊದಲಿನ ಥೀಮ್ ಬೇಸ್ಡ್ ಅಥವಾ ವಸ್ತು ಆಧಾರಿತ ಪಠ್ಯಕ್ರಮನ್ನು ನಿರಾಕರಿಸಿ ತನ್ನ ಮೂಲ ಮಾದರಿಗೆ ವಾಪಸ್ಸಾಗುವುದು ಕಂಡು ಬರುತ್ತದೆ.ಇಲ್ಲಿ ಬಿ.ಎ.,ಬಿ.ಕಾಂ., ಬಿ.ಬಿ.ಎಂ, ಬಿ.ಎಸ್ಸಿ, ಪಠ್ಯಕ್ರಮದ ಮಾದರಿ ಒಂದೇ ರೀತಿಯಾಗಿದ್ದು ಪಠ್ಯವಸ್ತು ಮಾತ್ರ ಬೇರೆಯಾಗಿದೆ. ಮೊದಲ ವರ್ಷದ ಪದವಿ ತರಗತಿಗಳಲ್ಲಿ ಕಾವ್ಯ–ಪ್ರಾಚೀನ, ಮಧ್ಯಕಾಲೀನ, ಸಣ್ಣಕತೆ, ವಿಮರ್ಶೆಯನ್ನೊಳಗೊಂಡ 'ಸಾಹಿತ್ಯ ಸಮನ್ವಯ' ಮತ್ತು ಒಂದು ನಾಟಕದಿಂದಲೂ ಎರಡನೇ ಸೆಮಿಸ್ಟರನಲ್ಲಿ ಮೊದಲಿನ ಅಂಶಗಳಿಗೆ ಸ್ವಲ್ಪ ಮಾರ್ಪಾಟು ಮಾಡಿ ನಮೋದಯ, ನವ್ಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ಕಾವ್ಯ, ಪ್ರಬಂಧ, ವಿಚಾರಸಾಹಿತ್ಯ ಮತ್ತುಕಾದಂಬರಿ ಎಂಬ ಸಾಹಿತ್ಯಕ ಪ್ರಕಾರಗಳನ್ನು ಇಡಲಾಗಿತ್ತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಾಹಿತ್ಯ ಎಂದರೆ ಕೇವಲ ಬರಹರೂಪಿಯಾದುದ್ದು ಮಾತ್ರ ಎಂಬ ಸರಳ ಸೂತ್ರಕ್ಕೆ ಬಂದು ನಿಂತರತಿದೆ. ಪ್ರಧಾನವಾಹಿನಿಯ ಅಂಚುಗಳಲ್ಲಿದ್ದು ವಿದ್ರೋಹದ ಕ್ಷೀಣದನಿಯಾಗುವುದಕ್ಕೆ ಮಾತ್ರ ಸೀಮಿತವಾಗಲು ಒಪ್ಪದ ದಮನಿತ ಸಮುದಾಯಗಳ ಏರುತ್ತಿರುವ ತಮ್ಮದನಿಯನ್ನು ಕೇಳಿಸಿಕೊಳ್ಳಲು ಬಲವಂತಿಸುತ್ತಿರುವ ಈ ಕಾಲಘಟ್ಟದಲ್ಲಿಯೇ ಜನಪದ ಕತೆ, ಹಾಡು, ತತ್ವಪದಗಳನ್ನು ಸಮಕಾಲೀನ ಸಂದರ್ಭದ ಮುಖ್ಯ ವಿಷಯಗಳೆಂದು ಪರಿಗಣಿಸಿಯೇ ಜನಪದ ಕತೆ, ಹಾಡು, ತತ್ವಪದಗಳನ್ನು ಸಮಕಾಲೀನ ಸಂದರ್ಭದ ಮುಖ್ಯ ವಿಷಯಗಳೆಂದು ಪರಿಗಣಿಸಿಯೇ ಇಲ್ಲವೇನೋ ಎಂಬ ಅನುಮಾನ ಮೂಡುವಂತಾಗುತ್ತದೆ. ಇಲ್ಲಿನ ಭಾಷೆ ಮತ್ತು ಸಾಹಿತ್ಯ ಏಕಮುಖಿಯಾಗಿದ್ದು ಸಂಸ್ಕೃತಿಯ ಬಹುಮುಖಿ ಚಹರೆಗಳು ಕಾಣೆಯಾಗಿವೆ. ಅಂದರೆ, ಭಾಷೆ ಏಕರೂಪಿಯಾಗಿರದೇ ಜಾತಿ, ಸಮುದಾಯ, ಪ್ರದೇಶ, ಲಿಂಗ, ವಯಸ್ಸು ಮೊದಲಾದ ಸಮಾಜಿಕ ನಡೆ ನುಡಿಗಳಿಗನುಗುಣವಾಗಿ ಭಾಷಾ ಬಳಕೆಯ ಸ್ವರೂಪವು ಬೇರೆಯಾಗಿರುತ್ತದೆ.ಆದರೆ ನಮ್ಮ ಪಠ್ಯಪುಸ್ತಕಗಳು ಈ ಭಾಷಿಕ ಬಹುಮುಖತೆಯನ್ನು ಸಂಪೂರ್ಣವಾಗಿ ಬಿಂಬಿಸುವಲ್ಲಿ ವಿಫಲವಾಗಿದೆ. ಕೇವಲ ಪ್ರಮಾಣೀಕೃತ ಭಾಷೆಯೊಂದನ್ನು ಮಾತ್ರ ಅಧಿಕೃತವಾಗಿ ಬಳಸುತ್ತಿರುವುದರಿಂದ ಭಿನ್ನ ಭಿನ್ನ ಭಾಷಿಕ ಸಮುದಾಯಗಳಿಂದ ಬರುವ ವಿಧ್ಯಾರ್ಥಿಗಳಿಗೆ ತಮ್ಮ ಮಾತು ಹಾಗೂ ಬರವಣಿಗೆಯ ಮೂಲಕ ಕಲಿಯುತ್ತಿರುವ ಭಾಷೆಗೂ ಅಂತರ ಉಂಟಾಗಿ ಅವರ ಕಲಿಕೆಯು ಯಶಸ್ವಿಯಾಗಲು ಕಷ್ಟಸಾಧ್ಯವಾಗುತ್ತಿದೆ.ಇನ್ನು ಪಠ್ಯ ವಿಷಯದ ಕಾದಂಬರಿಯ ಬಗೆಗೆ ಹೇಳುವುದಾದರೆ ಬಿ.ಬಿ.ಎಂ. ತರಗತಿಗೆ ಚದುರಂಗರ 'ವೈಶಾಖ' ಬಿ.ಎ. ತರಗತಿಗೆ 'ಬೆಟ್ಟದಜೀವ' ಬಿ.ಎಸ್ಸಿ ತರಗತಿಗೆ 'ಚಿರಸ್ಮರಣೆ' ಕಾದಂಬರಿಗಳನ್ನು ಇಡಲಾಗಿತ್ತು. ಈ ಕಾದಂಬರಿಗಳು ವಸ್ತು ವಿಷಯದ ದೃಷ್ಟಿಕೋನದಿಂದ ತುಂಬಾ ದೀರ್ಘವಾಗಿದ್ದು ಸೆಮಿಸ್ಟರನ ನಿಗದಿತ ಸಮಯದಲ್ಲಿ ಬೋಧಿಸುವುದುಕಷ್ಟಸಾಧ್ಯವಾಗಿದೆ.

## ಗುಲ್ಬರ್ಗಾ ವಿಶ್ವವಿದ್ಯಾಲಯದ ಪಠ್ಯಕ್ರಮದ ಸ್ವರೂಪ

ವಸ್ತು ಆಧಾರಿತ ಪಠ್ಯಕ್ರಮಕ್ಕೆ ಬದಲಾಗಿ ಇಲಿ ್ಲಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳನ್ನು ಒಳಗೊಂಡಂತೆ ಬೇರೆ ಬೇರೆ ಪದವಿಗಳಿಗನುಗುಣವಾಗಿ ಪಠ್ಯಗಳನ್ನು ರೂಪಿಸಲಾಗಿತ್ತು. ಬಿ.ಎಸ್ಸಿ., ಬಿ.ಕಾಂ., ಬಿ.ಎ., ಪದವಿ ತರಗತಿಗಳಿಗೆ ಭಾಷಾ ಪಠ್ಯಗಳಾಗಿ ಕ್ರಮವಾಗಿ

ವಿಜ್ಞಾನ ಸಂವಹನ, ವಾಣಿಜ್ಯ ಸಂವಹನ, ಕಲಾಸಂವಹನಗಳೆಂಬ ಪಠ್ಯ ಪುಸ್ತಕಗಳನ್ನು ಇಡಲಾಗಿತ್ತು. ವಿಶೇಷವೆಂದರೆ ಈ ಎಲ್ಲಾ ಪಠ್ಯದ ಲೇಖಕರು ಒಬ್ಬರೇ ಆಗಿದ್ದರು. ಮೂರು ಪಠ್ಯಗಳಲ್ಲಿಯೂ ವರ್ಣಮಾಲೆಯ ವಿವರಗಳು ಭಿನ್ನಭಿನ್ನವಾಗಿವೆ. 'ವಿಜ್ಞಾನ ಸಂವಹನವೆಂದರೆ ನೋಬಲ್ ಪ್ರಶಸ್ತಿ ಪಡೆದ ವಿಜ್ಞಾನಿಗಳ ಹೆಸರು, ದೇಶ, ಕಾಲವನ್ನು ಒಳಗೊಳ್ಳುವುದರ ಜೊತೆಗೆ ವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳನ್ನು ಒಳಗೊಂಡಿರುತ್ತದೆ. ಹಾಗೆಯೇ ವಾಣಿಜ್ಯ ಸಂವಹನವೆಂದರೆ ಪತ್ರವ್ಯವಹಾರವೇ ಆಗಿದೆ. ಹೀಗಾಗಿ ಕಾಲಮಾನದ ಸಾಂಸ್ಕೃತಿಕ ಒತ್ತಡಗಳಿಗನುಗುಣವಾಗಿ ವಿದ್ಯಾರ್ಥಿಗಳಿಗೆ ಏನನ್ನು ಕಲಿಸುತ್ತೇವೆ ಎನ್ನುವುದೇ ಪ್ರಶ್ನೆಯಾಗಿ ಉಳಿದಂತಿದೆ.

ಬಿ.ಎ. ಮೂರನೇ ಸೆಮಿಸ್ಟರ್‌ತರಗತಿಗೆ 'ಉರಿಲಿಂಗ' ಎಂಬ ನಾಟಕ ಮತ್ತು ದೇಸಾಯಿಯವರ 'ಮುಕ್ತಿ' ಕಾದಂಬರಿಗಳೆರಡೂ ಇದ್ದವು.ಈ ವಿಷಯಕ್ಕೆ ಸಂಬಂಧಿಸಿದಂತೆ ವಾರದಲ್ಲಿತಲಾ ಎರಡೆರಡು ತರಗತಿಗಳಂತೆ ವಿಭಜಿಸಲಾಗಿದ್ದು, ಸೆಮಿಸ್ಟರ ಪದ್ಧತಿಯಲ್ಲಿ ಇದನ್ನು ಪೂರೈಸುವುದೇ ಕಷ್ಟ ಸಾಧ್ಯವಾಗಿದೆ. ಹಾಗೆಯೇ ವೈಚಾರಿಕ ಸಾಹಿತ್ಯ ಎನ್ನುವಾಗ ದಲಿತ (ಸಾಹಿತ್ಯ) ಚಿಂತನೆ, ಜಾಗತೀಕರಣದ ಪ್ರಕ್ರಿಯೆಗಳು ಮಾತ್ರವೇ ಮುಖ್ಯವಾದಂತಿದೆ.ಪಠ್ಯಕ್ರಮದಲ್ಲಿ ಕ್ರಮಾನುಸಾರವಾಗಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ಕ್ರಮಬದ್ಧವಾದ ಮಾದರಿಯಲ್ಲಿರದೇ ಮೊದಲನೇ ಸೆಮಿಸ್ಟರನಲ್ಲಿ ಹಳಗನ್ನಡವನ್ನು ಅಭ್ಯಸಿಸಿದರೆ, ರಡನೇ ಸೆಮಿಸ್ಟರನಲ್ಲಿ ಹೊಸಗನ್ನಡವನ್ನು ಇಡಲಾಗಿದೆ. ಕಡ್ಡಾಯವಾಗಿರುವ ಪಠ್ಯಗಳೆಂದರೆ ಕಾವ್ಯಮೀಮಾಂಸೆ, ಛಂದಸ್ಸು, ಶಬ್ಧಮಣಿದರ್ಪಣ. ಪ್ರಶ್ನೆಯೆಂದರೆ ಇಡೀ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಮಹಿಳಾ ಸಾಹಿತ್ಯಚರಿತ್ರೆ ಎಂಬುದು ಅಂಚಿಗೆ ಸರಿದಿದೆ .ಹಾಗಾಗಿ ಇದನ್ನು ಪುನರ್‌ರಚಿಸುವ ಕೆಲಸಗಳೂ ನಡೆದಿವೆ. ಆದರೆ ಈ ಯಾವುದೇ ಸಂಗತಿಯು ಪಠ್ಯಕ್ರಮರಚನೆಯಲ್ಲಿ ಸೇರಿಕೊಂಡಿಲ್ಲ. ಏಕೆಂದರೆ ಇಡೀ ಪಠ್ಯಕ್ರಮವನ್ನು ಗಮನಿಸಿದರೆ ಕೆಲವು ಬಿಡಿ ಲೇಖನಗಳು, ಕತೆಗಳು ಮಾತ್ರ ಸೇರಲ್ಪಟ್ಟಿದಾವೆಯೇ ಹೊರತು ಇಡಿಯಾಗಿ ಮಹಿಳಾ ಲೇಖಕರ ಪಠ್ಯಗಳು ಸೇರಿಕೊಂಡಿಲ್ಲ.

ಸಾರ್ವತ್ರಿಕತೆಎನ್ನುವಾಗ ಸಮಾಜದಲ್ಲಿ ಮುಖ್ಯ ವಾಹಿನಿಯನ್ನೊಳಗೊಂಡಂತೆ ಅಂಚಿಗೆ ಸರಿಸಲ್ಪಟ್ಟ ಸಂಗತಿಗಳು ಸೇರಿಕೊಂಡಾಗ ಮಾತ್ರ ಅರ್ಥ ಬರುತ್ತದೆ.ಆದರೆ ಈ ಪಠ್ಯಕ್ರಮಗಳು ಇದರಿಂದ ದೂರ ನಿಂತಿವೆ ಎನಿಸುತ್ತದೆ.ಏಕೆಂದರೆ ಈ ಎಲ್ಲ ಪ್ರಕ್ರಿಯೆಗಳಲ್ಲಿ ಪ್ರಾದೇಶಿಕ ರಾಜಕಾರಣ, ವ್ಯಕ್ತಿ ರಾಜಕಾರಣಗಳೆಲ್ಲವೂ ಇರುತ್ತದೆ ಇದು ತಿಳಿಯೋದು ಸಹ ಪಠ್ಯಕ್ರಮದಿಂದಲೇ ಎಂಬುದು ನಿತ್ಯದ ಸಂಗತಿಯೇ ಆಗಿದೆ. ನಮ್ಮ ನಡುವೆ ಎಷ್ಟೇ ಭಾಷಾವಿಜ್ಞಾನಿಗಳಿದ್ದರೂ ಇವರ್‍ಯಾರೂ ಪಠ್ಯರಚನಾ ಸಮಿತಿಯ ಕಣ್ಣಿಗೆ ಬೀಳುವುದಿಲ್ಲ ಎನ್ನಿಸುತ್ತದೆ. ಹಾಗಾಗಿ ಯಾರೋ ಒಬ್ಬರ ವಿಚಾರಗಳೇ ಮತ್ತೆ ಮತ್ತೆ ಪುನರಾವರ್ತನೆಯಾಗುತ್ತವೆ.

## ವಿಜಾಪುರ ವಿಶ್ವವಿದ್ಯಾಲಯದ ಪಠ್ಯಕ್ರಮದ ಸ್ವರೂಪ

ವಿಜಾಪುರ ವಿಶ್ವವಿದ್ಯಾಲವು ೨೦೦೯–೧೦ನೇ ಸಾಲಿನ ಬಿ.ಎ. ಮೂರನೇ ಸೆಮಿಸ್ಟರಗೆ ಐಚ್ಛಿಕಕನ್ನಡ ಪಠ್ಯದಲ್ಲಿ ಹೊಸಗನ್ನಡ ಸಾಹಿತ್ಯಚರಿತ್ರೆಯ ೪ ಪ್ರಮುಖ ಘಟ್ಟಗಳ ಜೊತೆಗೆ ಸುಮಾರು ೩೨ ಕವಿಗಳ ವಿವರವಾದ

ಅಧ್ಯಯನವನ್ನು ಪಠ್ಯಕ್ರಮದಲ್ಲಿ ಇಡಲಾಗಿತ್ತು. ೨೦೧೦–೧೧ನೇ ಸಾಲಿನ (ಆರನೆ) ಸೆಮಿಸ್ಟರಗೆ ಅವಶ್ಯಕಕನ್ನಡ ವಿಷಯವಾಗಿ ಸಮೂಹ ಮಾಧ್ಯಮಗಳ ವಿವಿಧ ಪ್ರಕಾರತಮ್ತು ವಿಭಾಗಗಳೊಂದಿಗೆ 'ಗರತಿಯ ಹಾಡುಗಳು' ಸಂಗ್ರಹದ ಕೆಲವು ಭಾಗಗಳು ಮತ್ತು ನಾಗತಿಹಳ್ಳಿ ಚಂದ್ರಶೇಖರಅವರ ಪ್ರವಾಸಕಥನ 'ಅಯನ' ಎನ್ನುವುದನ್ನು ಇಡಲಾಗಿದ್ದು, ಇಮಗಳು ಸೆಮಿಸ್ಟರ್‌ಅವಧಿಗೆ ತುಂಬಾ ಅಧಿಕವಾಗುತ್ತವೆ. ನಾಲ್ಕು ತಿಂಗಳ ಅವಧಿಯಲ್ಲಿ ಅವುಗಳನ್ನು ಬೋಧಿಸುವುದು ಕಷ್ಟ ಸಾಧ್ಯವಾಗುತ್ತದೆ.

ವಿದ್ಯಾರ್ಥಿಗಳು ಬೌದ್ಧಿಕವಾಗಿ, ವೈಚಾರಿಕವಾಗಿ ಬೆಳೆಯಲು ಮತ್ತು ನಾಡು–ನುಡಿಗಳನ್ನು ಕಟ್ಟುವ ನಿಟ್ಟಿನಲ್ಲಿ ಅವರಿಗೆ ಸಂಪೂರ್ಣ ನಾಡಿನ ಪರಿಚಯವಾಗಬೇಕು ಅಂದರೆ ವಿದ್ಯಾರ್ಥಿಯು ನಾಡಿನ ಯಾವುದೇ ಭಾಗದಲ್ಲಿಅಧ್ಯಯನ ಮಾಡುತ್ತಿದ್ದರೂ ಅವನಿಗೆ ಇಡೀ ನಾಡಿನ ಚರಿತ್ರೆ, ಸಾಹಿತ್ಯ, ಸಂಸ್ಕೃತಿಗಳ ಅರಿವಿರಬೇಕು.ಆದರೆ ಇಲ್ಲಿಯವರೆಗೆ ಅಂತಹ ಪಠ್ಯಕ್ರಮರಚನೆಯಾಗಿಲ್ಲ. ಉದಾಹರಣೆಗಾಗಿ ಹೇಳುವುದಾದರೆ ಜನಪದ ಮಹಾಕಾವ್ಯಗಳೆಂದರೆ ದಕ್ಷಿಣಕರ್ನಾಟಕದವರಿಗೆ ಮಂಟೇಸ್ವಾಮಿ, ಮಲೆಮಹಾದೇಶ್ವರ ಕಾವ್ಯಗಳಾದರೆ ಉತ್ತರಕರ್ನಾಟಕದವರಿಗೆ ಶರಣಬಸವೇಶ್ವರ ಪುರಾಣ, ಸಂಗ್ಯಾ ಬಾಳ್ಯಾದಂತಹ ಜನಪದ ಕಾವ್ಯಗಳು. ಉತ್ತರಕರ್ನಾಟಕದ ವಿದ್ಯಾರ್ಥಿಗಳಿಗೆ ಮಂಟೇಸ್ವಾಮಿ ಪರಿಚಯವಿಲ್ಲ. ದಕ್ಷಿಣದವರಿಗೆ ಶರಣಬಸವೇಶ್ವರ ಗೊತ್ತಿಲ್ಲ. ಈ ರೀತಿಯ ಹಲವಾರು ವೈರುಧ್ಯಗಳನ್ನು ಪಠ್ಯಕ್ರಮದಲ್ಲಿ ಕಾಣುತ್ತೇವೆ. ಆದ್ದರಿಂದ ನಾಡನ್ನು ಕಟ್ಟಿ ಬೆಳೆಸಿ ಉಳಿಸುವ ಜವಾಬ್ದಾರಿಯಿರುವ ವಿದ್ಯಾರ್ಥಿಗಳಲ್ಲಿ ಸಮಗ್ರ ನಾಡಿನ ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗ್ಗೆ ಸರಿಯಾದ ತಿಳುವಳಿಕೆ ಮೂಡಿಸುವ ಕೆಲಸವನ್ನು ಪಠ್ಯಕ್ರಮ ಒಳಗೊಂಡಿಲ್ಲ.

ಒಟ್ಟಿನಲ್ಲಿ ಇಲ್ಲಿನ ಬೋಧನಾಕ್ರಮ ವಸಾಹತುಕಾಲಘಟ್ಟದ ಹಿನ್ನೆಲೆಯಲ್ಲಿ ಬಂದಿರುವುದನ್ನು ಕಾಣಬಹುದು.ಈ ಬೋಧನಾಕ್ರಮದ ಉದ್ದೇಶವೆಂದರೆ, ವಿದ್ಯಾರ್ಥಿಗಳು ತಪ್ಪಿಲ್ಲದೆ ಬರೆಯುವುದು, ಗ್ರಹಿಸುವುದು, ಅರ್ಥಮಾಡಿಕೊಳ್ಳುವುದೇ ಆಗಿದೆ. ಆದರೆ ಇವುಗಳ ಜೊತೆಗೆ ಅಭಿವ್ಯಕ್ತಿಸುವುದು, (ಮೌಖಿಕ ಮತ್ತು ಲಿಖಿತ) ಯೋಚಿಸುವುದು, ವಿಮರ್ಶಿಸುವುದು ಮತ್ತು ಪಠ್ಯವನ್ನು ಸಮಕಾಲೀನ ನೆಲೆಯಲ್ಲಿಟ್ಟು ತುಲನೆ ಮಾಡುವುದು, ಬರೆಯುವುದು ಮುಂತಾದ ಕೌಶಲ್ಯಗಳನ್ನು ಭಾಷೆ ಮತ್ತು ಸಾಹಿತ್ಯದ ತರಗತಿಗಳು ಬೆಳೆಸಬೇಕು.ವಿದ್ಯಾರ್ಥಿಗಳು ಬೇರೆ ಬೇರೆ ಪ್ರದೇಶ, ಜಾತಿ, ವರ್ಗ ಭಾಷೆಗಳಿಂದ ಬಂದಿರುವುದರಿಂದ ವಿದ್ಯಾರ್ಥಿಗಳು ಸಂಕೋಚ ಮತ್ತು ಕೀಳರಿಮೆಯಿಂದ ಉತ್ತರಿಸಲಾಗದ ಸಂದರ್ಭ ಉಂಟಾಗುತ್ತದೆ .ಆದ್ದರಿಂದ ಅಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಪ್ರಮಾಣಿಕೃತ ಭಾಷೆಯಲ್ಲಿಯೇ ಬರೆಯುವಂತೆಒತ್ತಾಯಿಸದೇ ತಮ್ಮ ತಮ್ಮರೀತಿಯಲ್ಲಿಯೇ ವಿಚಾರಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುವಂತಹ ವಾತಾವರಣವನ್ನು ತರಗತಿಯಲ್ಲಿ ನಿರ್ಮಿಸುವಂತೆ ಆಗಬೇಕಿದೆ.

ಇನ್ನು ಇತ್ತೀಚಿನ ಸೆಮಿಸ್ಟರ್ ಪದ್ಧತಿಯಲ್ಲಿ ಕೆಲವೊಮ್ಮೆ ಪಠ್ಯಪುಸ್ತಕಗಳೇ ತಡವಾಗಿ ಬರುವುದು ಸಾಮಾನ್ಯವಾಗಿದೆ.ಕೆಲವು ತಿಂಗಳಲ್ಲಿ ಎಲ್ಲವನ್ನು ಮುಗಿಸಲು ಉಪನ್ಯಾಸಕರಿಗೆ ಕಷ್ಟಸಾಧ್ಯವಾಗಿದೆ.ಭಾಷಾಕಲಿಕೆಯನ್ನುಂಟು ಮಾಡಬೇಕೆ? ಸಾಹಿತ್ಯಕ ವಿಷಯಗಳನ್ನು ಬೋಧಿಸಬೇಕೆ? ವಸ್ತು ವಿಷಯದ ಬಗ್ಗೆ ಪರಿಣಾಮಕಾರಿಯಾಗಿ ತಿಳಸಬೇಕೆ? ಅಥವಾ ಪರೀಕ್ಷಾದೃಷ್ಟಿಕೋನದಿಂದಷ್ಟೇ ಮನವರಿಕೆ ಮಾಡಬೇಕೆ?ಎಂಬ ಗೊಂದಲಗಳು ಭಾಷಾ ಬೋಧಕರಿಗೆ ಸವಾಲಾಗಿಯೇ ಪರಿಣಮಿಸಿವೆ.

## ಗ್ರಂಥಋಣ


೧) ಬೆಂಗಳೂರು ವಿಶ್ವವಿದ್ಯಾಲಯದ ಪಠ್ಯಕ್ರಮ ೨೦೧೦, ೨೦೧೧

೨) ಪಠ್ಯಕ್ರಮ–ಕರ್ನಾಟಕರಾಜ್ಯ ಮಹಿಳಾ ವಿಶ್ವವಿದ್ಯಾಲಯ ಬಿಜಾಪುರ ೨೦೦೯, ೨೦೧೦.+

೩) ಪಠ್ಯಕ್ರಮ– ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ೨೦೧೦, ೨೦೧೧.

4) ಶರಣಬಸವೇಶ್ವರರಚರಿತ್ರೆ ಶರಣಬಸವೇಶ್ವರ ಸಂಸ್ಥಾನ– ಗುಲಬರ್ಗಾ.